ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಶ್ರೀ ಎ.ಎಂ. ಸಮೀವುಲ್ಲಾ -ವಿರುದ್ಧ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಹಿರಿಯ ಕಾರ್ಮಿಕ ಇನ್ಸ್ಪೆಕ್ಟರ್ 7 ನೇ ವಲಯ, ಬೆಂಗಳೂರು ನಗರ*

ಕ್ರಿಮಿನಲ್ ಪುನರೀಕ್ಷಣಾ ಅರ್ಜಿಸಂಖ್ಯೆ: 220/2011, ದಿನಾಂಕ 13 ನೇ ನವೆಂಬರ್ , 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:

ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ಮತ್ತು ನಿಯಮಗಳು 1963 ರ 4 ( 1) ನೇ ಪ್ರಕರಣ ಮತ್ತು 3 ನೇ ಮತ್ತು 6 ಎ, 12 ( 1) ಪ್ರಕರಣ ಮತ್ತು 240 ಎ ನಿಯಮದ ಅಡಿಯಲ್ಲಿನ ಅಪರಾಧಕ್ಕಾಗಿ ಇದರಲ್ಲಿನ ಅಪರಾಧಿ ಅರ್ಜಿದಾರನನ್ನು ಅಪರಾಧಿಯೆಂದು ನಿರ್ಣಯಿಸಿ ಅಧಿವಿಚಾರಣಾ ನ್ಯಾಯಾಲಯವು ಸಿ.ಸಿ.ಸಂಖ್ಯೆ:1272/2006 ರಲ್ಲಿ ಜಾರಿ ಮಾಡಿದ ಅಪರಾಧ ನಿರ್ಣಯ ಮತ್ತು ಶಿಕ್ಷೆಯ ತೀರ್ಪನ್ನು ಸ್ಥಿರೀಕರಿಸಿ, ಅಪೀಲನ್ನು ವಜಾಗೊಳಿಸಿ ಅಪೀಲು ನ್ಯಾಯಾಲಯವು ಕ್ರಿ.ಅ.ಸಂ. 535/2010 ರಲ್ಲಿ ನೀಡಿದದಿನಾಂಕ: 4.11.2010 ರ ತೀರ್ಪಿನ ವಿರುದ್ಧ ನಿರ್ದೇಶಿತವಾದ ಅರ್ಜಿ ಇದಾಗಿದೆ.ಮುಂದುವರೆದು, ಅಪರಾಧಿಗೆ ಅರ್ಜಿದಾರನಿಗೆ, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ಮತ್ತು ನಿಯಮಗಳು, 1963 ರ 24 ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ 15,000/- ರೂ.ಗಳ ಜುಲ್ಮಾನೆಯನ್ನು 4 ( 1) ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ 1,000/- ರೂ.ಗಳ ಜುಲ್ಮಾನೆಯನ್ನು, 6 ಎ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ 1,000/- ರೂ.ಗಳ ಜುಲ್ಮಾನೆಯನ್ನು ಮತ್ತು 24 ಎ ನಿಯಮದ ಅಡಿಯಲ್ಲಿನ ಅಪರಾಧಕ್ಕಾಗಿ 250/- ರೂ.ಗಳ ಜುಲ್ಮಾನೆಯನ್ನು ಪಾವತಿಸುವ ಶಿಕ್ಷೆಯನ್ನು ಮತ್ತು ಅಪೀಲುದಾರ ಜುಲ್ಮಾನೆಯನ್ನು ಪಾವತಿಸಲು ವಿಫಲನಾದ ಸಂದರ್ಭದಲ್ಲಿ ಪ್ರತಿಯೊಂದು ಅಪರಾಧದ ಸಂಬಂಧದಲ್ಲಿ ತಪ್ಪಿತ ಖಂಡಗಳನ್ನು ವಿಧಿಸಲಾಗಿದೆ.

ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಗೈರು ಹಾಜರಾಗಿರುವರು.ಆದಾಗ್ಯೂ, ಈ ಮೊಕದ್ದಮೆಯ ಸಂಬಂಧದಲ್ಲಿ ನ್ಯಾಯಾಲಯ ಸಲಹೆಗಾರನಾಗಿ ನೇಮಕಗೊಂಡಿರುವ ಮಾನ್ಯ ನ್ಯಾಯವಾದಿ ಶ್ರೀ ಜಿ.ಎಂ. ಆನಂದ ಮತ್ತು ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರಾದ ಶ್ರೀ ತೇಜಸ್ ಪಿ. ಅವರ ವಾದಗಳನ್ನು ಆಲಿಸಲಾಗಿದೆ.

ಅರ್ಜಿಯ ವಾಸ್ತವಿಕ ಸಂಕ್ಷಿಪ್ತ ಸಂಗತಿಗಳು ಈ ಕೆಳಗಿನಂತಿದೆ:

ಪ್ರತ್ಯರ್ಜಿದಾರ ದೂರುದಾರನಾದ ಹಿರಿಯ ಕಾರ್ಮಿಕ ಇನ್ಸ್ಪೆಕ್ಟರ್ ಅರ್ಜಿದಾರನ ವಿರುದ್ಧ ದೂರನ್ನು ದಾಖಲಿಸಿರುವನು.ದೂರಿನಲ್ಲಿ ಅರ್ಜಿದಾರನ ವಿರುದ್ಧ ಮಾಡಲಾದ ಆರೋಪಗಳು ಹೀಗಿದೆ.ಹಿರಿಯ ಕಾರ್ಮಿಕ ಇನ್ಸ್ಪೆಕ್ಟರ್ ಮತ್ತು ಇತರ ಅಧಿಕಾರಿಗಳು ಅರ್ಜಿದಾರನು ಮಾಲಿಕನಾಗಿರುವ ಗಾಂಧಿನಗರದ, ಬೃಂದಾವನ ಹೋಟೆಲ್ ಕಟ್ಟಡದಲ್ಲಿರುವ ' ಜೆಂಟ್ಸ್ ಸೆಲೆಕ್ಟ್ ಟೈಲರ್ ಶಾಪ್ ಅನ್ನುದಿನಾಂಕ: 27.1.2006 ರ ಮಧ್ಯಾಹ್ನ 12.45

ರ ಸುಮಾರಿಗೆ ತಪಾಸಣೆ ಮಾಡಿದಾಗ, ಇಬ್ಬರು ಬಾಲ ಕಾರ್ಮಿಕರು ಎಂದರೆ ಮಾಸ್ಟರ್ ಆನಂದ್, 12 ವರ್ಷ ವಯಸ್ಸು ಮತ್ತು ಮಾಸ್ಟರ್ ನರೇಂದ್ರ 13 ವರ್ಷ ವಯಸ್ಸಿನ ಬಾಲಕರು ಅಲ್ಲಿ ಕೆಲಸ ಮಾಡುತ್ತಿರುವುದು ಕಂಡು ಬಂದು. ಈ ಇಬ್ಬರು ಬಾಲಕರನ್ನು ಸದರಿ ಟೈಲರ್ ಅಂಗಡಿಯಲ್ಲಿ ಅರ್ಜಿದಾರನು ಕೆಲಸಕ್ಕೆ ಇಟ್ಟುಕೊಂಡಿದ್ದನು.ಸದರಿ ಅಂಗಡಿಯಲ್ಲಿ ಈ ಇಬ್ಬರು ಬಾಲಕರು ಸಹಾಯಕರಾಗಿ ಕೆಲಸ ಮಾಡುತ್ತಿರುವುದು ಕಂಡು ಬಂದಿದೆ.ಅರ್ಜಿದಾರನಿಗೆ ಸದರಿ ಬಾಲ ಕಾರ್ಮಿಕರ ವಯಸ್ಸಿನ ಸಾಕ್ಷ್ಯವನ್ನು ಸಹ ನೀಡಲು ಸಾಧ್ಯವಾಗಿಲ್ಲ.ಆದಾಗ್ಯೂ, ಸದರಿ ಬಾಲಕರನ್ನು ಸ್ಥಳದಲ್ಲಿಯೇ ವೈದ್ಯರಿಂದ ಪರೀಕ್ಷೆಗೆ ಒಳಪಡಿಸಿದಾಗ, ಆ ಬಾಲಕರ ವಯಸ್ಸು 14 ವರ್ಷಕ್ಕಿಂತ ಕೆಳಗಿನ ವಯಸ್ಸಿನವರೆಂದು ವೈದ್ಯರು ಅಭಿಪ್ರಾಯ ವ್ಯಕ್ತಪಡಿಸಿರುವರು.ಅರ್ಜಿದಾರನು ಅಧಿಕಾರಿಗಳಿಗೆ ಬಾಲ ಕಾರ್ಮಿಕರ ನೇಮಕಕ್ಕೆ ಕಾರಣಗಳನ್ನು ವಿವರಿಸಲು ಸಹ ಅವನಿಂದ ಸಾಧ್ಯವಾಗಿರುವುದಿಲ್ಲ.ಆದುದರಿಂದಲೇ ಸ್ಥಳದಲ್ಲಿಯೇ ಪರಿಶೀಲನಾ ವರದಿಯನ್ನು ಸಹ ಸಿದ್ಧಪಡಿಸಿ ಮತ್ತು ತಪಸಣಾ ಕಾಲದಲ್ಲಿ ಕಂಡು ಬಂದ ವ್ಯಕ್ತಿಗೆ ಅದನ್ನು ನೀಡಲಾಯಿತು ಮತ್ತು ಬಾಲ ಕಾರ್ಮಿಕರ ಹೇಳಿಕೆಗಳನ್ನು ಸಹ ಅಭಿಲೇಖಿಸಿಕೊಳ್ಳಲಾಯಿತು.ತದನಂತರದಲ್ಲಿ ದೂರುದಾರನು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ಮತ್ತು ನಿಯಮಗಳು 1963 ರ 4 ( 1) ನೇ ಪ್ರಕರಣ, 3 ನೇ ನಿಯಮ ಮತ್ತು 6 ಎ ಪ್ರಕರಣ 12 ( 1) ನೇ ಪ್ರಕರಣ ಮತ್ತು 24 ಎ ನಿಯಮದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಪ್ರಸಕ್ತ ಅರ್ಜಿದಾರನ ವಿರುದ್ಧ ದೂರನ್ನು ದಾಖಲಿಸಿರುವನು.

ಅಧಿವಿಚಾರಣಾ ನ್ಯಾಯಾಲಯ ದೂರುದಾರನ ಮತ್ತು ಸಾಕ್ಷಿದಾರರ ಪ್ರತಿಜ್ಞಾ ಹೇಳಿಕೆಗಳನ್ನು ಸಂಜ್ಞಾನಕ್ಕೆ ತಂದುಕೊಂಡು ಅರ್ಜಿದಾರನ ವಿರುದ್ಧ ಮೊಕದ್ದಮೆಯನ್ನು ನೋಂದಾಯಿಸಿದೆ ಮತ್ತು ಅರ್ಜಿದಾರನಿಗೆ ಸಮನ್ಸಗಳನ್ನು ಜಾರಿ ಮಾಡಿತು.ಅರ್ಜಿದಾರನು ಸಮನ್ಸ್‌ಗಳಿಗೆ ಹಾಜರಾಗಿ, ತಾನು ತಪ್ಪಿಸ್ಥನಲ್ಲವೆಂದು ವಾದವನ್ನು ನಿವೇದಿಸಿದ ನಂತರದಲ್ಲಿ, ಪ್ರಾಸಿಕ್ಯೂಷನ್ ಪ್ರಾ.ಸಾ. 1 ರಿಂದ 4 ರ ವರೆಗಿನ ಸಾಕ್ಷಿದಾರರಾದ ವಿಚಾರಣೆ ಮಾಡಿತು ಮತ್ತು ದಸ್ತಾವೇಜುಗಳನ್ನು ನಿಶಾನೆ ಪಿ ರಿಂದ ಪಿ .9 ಎಂದು ಗುರುತು ಮಾಡಲಾಗಿದೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.ಆದಾಗ್ಯೂ ಪ್ರತಿವಾದಿಯು ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ.ತದನಂತರದಲ್ಲಿ ಅಧಿವಿಚಾರಣಾ ನ್ಯಾಯಾಲಯವು ಉಭಯ ಪಕ್ಷಕಾರರು ಮಂಡಿಸಿದ ವಾದಗಳನ್ನು ಆಲಿಸಿದ ನಂತರದಲ್ಲಿ ಆರೋಪಿತ ಅಪರಾಧಗಳಿಗಾಗಿ ಆರೋಪಿ ಅರ್ಜಿದಾರನನ್ನು ಅಪರಾಧಿಯೆಂದು ನ್ಯಾಯ ನಿರ್ಣಯಿಸಿ ಮೇಲೆ ಹೇಳಲಾದಂತೆ ಶಿಕ್ಷೆಯನ್ನು ವಿಧಿಸಿತು.

ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಸದರಿ ತೀರ್ಪನ್ನು ಅಪೀಲು ನ್ಯಾಯಾಲಯದ ಮುಂದೆ ಕ್ರಿ.ಅ.ಸಂ. 535/2010 ರಲ್ಲಿ ಪ್ರಶ್ನಿಸಲಾಗಿದೆ.ಅಪೀಲು ನ್ಯಾಯಾಲಯವು, ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಿದ ನಂತರದಲ್ಲಿ, ಪರಿಗಣಿಸುವುದಕ್ಕಾಗಿ ಅಂಶಗಳನ್ನು ರೂಪಿಸಿದೆ ಮತ್ತು ಪರಿಗಣಿತ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ ಮತ್ತು ಆ ಮೂಲಕ ಅಪೀಲನ್ನು ವಜಾಗೊಳಿಸಲಾಗಿದೆ ಮತ್ತು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ನ್ಯಾಯ ನಿರ್ಣಿತ ತೀರ್ಪನ್ನು ಮತ್ತು ಶಿಕ್ಷೆಯನ್ನು ಅದು ಸ್ಥಿರೀಕರಿಸಿದೆ.  ಅರ್ಜಿದಾರ-ಆರೋಪಿಯು ವಿವಿಧ ಕಾರಣಗಳನ್ನು ಮಂಡಿಸಿ, ಈ ಪುನರೀಕ್ಷಣಾ ಅರ್ಜಿಯಲ್ಲಿ ಈ ತೀರ್ಪುಗಳನ್ನು ಪ್ರಶ್ನಿಸಿರುತ್ತಾನೆ.

ಅರ್ಜಿದಾರ-ಆರೋಪಿಯ ಪರವಾಗಿ ಹಾಜರಾದ ಮಾನ್ಯ ನ್ಯಾಯಾಲಯ ಸಲಹೆಗಾರ ನ್ಯಾಯವಾದಿಗಳು ಅರ್ಜಿದಾರನ ವಿರುದ್ಧ ದಾಖಲಿಸಿದ ಮೊಕದ್ದಮೆಗೆ ಯಾವುದೇ ಆಧಾರವಿರುವುದಿಲ್ಲ ನ್ಯಾಯಾಲಯದ ಮುಂದೆ ಹೂಡಲಾದ ನಿಶಾನೆ ಪಿ .7 ರ ದೂರು 27.3.2005 ದಿನಾಂಕದ್ದಾಗಿರುವುದರಿಂದ ಕೇವಲ ಅಂಕಿ ಅಂಶಗಳ ಉದ್ದೇಶಕ್ಕಾಗಿ ಮಾತ್ರವೇ ದೂರನ್ನು ದಾಖಲಿಸಲಾಗಿದೆ ಎಂದು ತಮ್ಮ ವಾದದಲ್ಲಿ ನಿವೇದಿಸಿರುವರು.ದಿನಾಂಕ: 27.01.2006 ರಂದು ಮಧ್ಯಾಹ್ನ 12.45 ರ ಸುಮಾರಿಗೆ ಅಂಗಡಿಯನ್ನು ತಪಾಸಣೆ ಮಾಡಲಾಗಿದ್ದಾಗ್ಯೂ, ಅಂಗಡಿಯನ್ನು ತಪಾಸಣೆ ಮಾಡುವ ಮುಂಚಿತವಾಗಿಯೇ ಹೇಗೆ ದೂರು ದಾಖಲಾಗಿದೆ ಎಂಬುದಕ್ಕೆ ಯಾವುದೇ ವಿವರಣೆಗಳನ್ನು ಇದುವರೆಗೂ ನೀಡಿರುವುದಿಲ್ಲ ಎಂದು ವಾದಾಂಶದಲ್ಲಿ ನಿವೇದಿಸಿರುವರು.

ಮಾನ್ಯ ನ್ಯಾಯವಾದಿಗಳು ತಮ್ಮ ವಾದಾಂಶವನ್ನು ಮುಂದುವರೆಸಿ, ನಿಶಾನೆ ಪಿ .7 ರಲ್ಲಿರುವ ದೂರಿನಲ್ಲಿ, ಸದರಿ ಅಪರಾಧ ನಡೆದಿದೆಯೆಂದು ಹೇಳಲಾದ ಸ್ಥಳ " 66 ಜೆಂಟ್ಸ್ ಸೆಲೆಕ್ಟ್ ಟೈಲರ್, " ಕೆಳ ಮಹಡಿ, ಬೃಂದಾವನ ಹೊಟೇಲ್ ಕಟ್ಟಡ ಎಂದು ನಮೂದಿತವಾಗಿದ್ದು, ಅದನ್ನು ದೂರುದಾರ ಪ್ರಾ.ಸಾ.] ತನ್ನ ಮುಖ್ಯ ವಿಚಾರಣೆಯಲ್ಲಿಯೂ ಹೇಳಿಕೆ ನೀಡಿರುತ್ತಾನೆ.ಅಲ್ಲದೆ ಬಾಲಕಾರ್ಮಿಕನಾದ ಮಾಸ್ಟರ್ ಆನಂದ್ ರಾಜ್ನ ಆರೋಪಿತ ಹೇಳಿಕೆಯಾಗಿರುವ ನಿಶಾನೆ ಪಿ .1 ರಲ್ಲಿ ಅಪರಾದ ನಡೆದ ಸ್ಥಳ ಜಿನ್ನಾಗರಮ್ಮ ದೇವಸ್ಥಾನದ ಮುಂದೆ ಎಂದು ನಮೂದಿತವಾಗಿದೆ.ಮುಂದುವರೆದು, ಬಾಲ ಕಾರ್ಮಿಕ ಮಾಸ್ಟರ್ ನರೇಂದ್ರನ ಆರೋಪಿತ ಹೇಳಿಕೆಯಾಗಿರುವ ನಿಶಾನೆ ಪಿ .2 ರಲ್ಲಿ ತ್ರಿಭುವನ ಹೊಟೇಲಿನ ತಳ ಮಹಡಿಯಲ್ಲಿ ಅಪರಾಧ ನಡೆದ ಸ್ಥಳವೆಂದು ನಮೂದಿತವಾಗಿ, ನಿಶಾನೆ ಪಿ .3 ರಲ್ಲಿರುವ ತಪಾಸಣಾ ವರದಿಯಲ್ಲಿ ಬೃಂದಾವನ ಕಟ್ಟಡದಲ್ಲಿನ ನೆಲಮಾಳಿಗೆಯಲ್ಲಿರುವ ಅಂಗಡಿ ಎಂದು ಹೇಳಿಕೆಯನ್ನು ದಾಖಲಿಸಿದೆ.ನಿಶಾನೆ ಪಿ .4 ರಲ್ಲಿ ಸ್ಥಳವು ತ್ರಿಭುವನ ಥೇಟರ್ನ 5 ನೇ ಮುಖ್ಯ ರಸ್ತೆಯ ಅಭಿಮುಖವಾಗಿದೆ ಎಂದು ಹೇಳಲಾಗಿದೆ.ನಿಶಾನೆ ಪಿ .6 ರಲ್ಲಿ ಮತ್ತೆ ಬೃಂದಾವನ ಕಟ್ಟಡದ ನೆಲಮಾಳಿಗೆ ಎಂದು ನಮೂದುಗೊಂಡಿದೆ.ಮಾನ್ಯ ನ್ಯಾಯವಾದಿಗಳು, ಬೃಂದಾವನ ಕಟ್ಟಡ, ಜಿನ್ನಾಗರಮ್ಮ ದೇವಸ್ಥಾನ, ತ್ರಿಭುವನ ಥೆಟರ್ ಇವು ಗಾಂಧಿನಗರದ ವಿವಿಧ ಸ್ಥಳಗಳಲ್ಲಿವೆ ಮತ್ತು " ಜೆಂಟ್ಸ್ ಸೆಲೆಕ್ಟ್ ಟೈಲರ್ " ಅಂಗಡಿ ಇದ್ದ ಸ್ಥಳದ ಸಂಬಂಧದಲ್ಲಿ, ಅಸಂಗತತೆ ಇರುವುದು ಕಂಡುಬರುತ್ತದೆ ಮತ್ತು ಅಪರಾಧದ ಸ್ಥಳದ ಸಂಬಂಧದಲ್ಲಿ ಗಂಭೀರವಾದ ಸಂದೇಹಗಳನ್ನು ನಿವಾರಿಸುವುದಕ್ಕೆ ಪ್ರಾಸಿಕ್ಯೂಷನ್ಗೆ ಸಾಧ್ಯವಾಗಿಲ್ಲ ಎಂಬುದು ನ್ಯಾಯವಾದಿಗಳ ವಾದಾಂಶವಾಗಿದೆ.

ಮಾನ್ಯ ನ್ಯಾಯವಾದಿಗಳು ತಮ್ಮ ವಾದಾಂಶವನ್ನು ಮುಂದುವರೆಸಿ, ಅರ್ಜಿದಾರನು " ಜೆಂಟ್ಸ್ ಸೆಲೆಕ್ಟ್ ಟೈಲರ್ " ಮಾಲೀಕನೇ ಅಥವಾ ಅವನು ಆ ಆವರಣದ ಬಾಡಿಗೆದಾರನೇ ಎಂಬುದರ ಬಗ್ಗೆ ಯಾವುದೇ ಸಾಕ್ಷ್ಯವನ್ನು ೧ ಸಂಗ್ರಹಿಸಿರುವುದಿಲ್ಲ.ಅರ್ಜಿದಾರನು ಸಂಗತಿಯನ್ನು ರುಜುವಾತುಪಡಿಸುವುದಕ್ಕೆ ಅರ್ಜಿದಾರನು ಸದರಿ ಟೈಲರ್ ಅಂಗಡಿಯ ಮಾಲೀಕ ಅಥವಾ ಬಾಡಿಗೆದಾರ ಅಥವಾ ಭೋಗ್ಯದಾರನಾಗಿ ಆರೋಪಿಸಲಾದ ಆವರಣದಲ್ಲಿ ಸದರಿ ಅಂಗಡಿಯನ್ನು ನಿಜವಾಗಲೂ ನಡೆಸುತ್ತಿದ್ದನೆಂಬ ಸಂಗತಿಯನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್, ಭೋಗ್ಯ ಒಪ್ಪಂದ ಪತ್ರದ ಪ್ರತಿಯನ್ನಾಗಲೀ ಅಥವಾ ಶುದ್ಧ ಕ್ರಯ ಪತ್ರದ ಪ್ರತಿಯನ್ನಾಗಲೀ ಹಾಜರುಪಡಿಸಿರುವುದಿಲ್ಲ ಎಂದು ವಾದಿಸಿರುತ್ತಾರೆ.ಪ್ರಾ.ಸಾ .1 ರ ಪಾಟೀ ಸವಾಲಿನಲ್ಲಿ ಸಹ ಅರ್ಜಿದಾರನು ಸದರಿ ಟೈಲರ್ ಅಂಗಡಿಯ ಮಾಲೀಕ ಎಂಬುದನ್ನು ಸಾಬೀತುಪಡಿಸುವುದಕ್ಕೆ ಯಾವುದೇ ದಸ್ತಾವೇಜನ್ನು ಪಡೆದುಕೊಂಡಿಲ್ಲ ಮತ್ತು ಗುರುತು ಮಾಡಿಲ್ಲ ಎಂಬ ಅಂಶವನ್ನು ಅವನು ಒಪ್ಪಿಕೊಂಡಿದ್ದಾನೆ.

ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ತಮ್ಮ ವಾದವನ್ನು ಮು ಂ ದುವರೆಸುತ್ತಾ ಅರ್ಜಿದಾರನು ಆರೋಪಿತ ಬಾಲ ಕಾರ್ಮಿಕರ ಉದ್ಯೋಗದಾತನಾಗಿರಲಿಲ್ಲ.ಅರ್ಜಿದಾರನ ಹತ್ತಿರ ಈ ಬಾಲ ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂಬುದನ್ನು ರುಜುವಾತುಪಡಿಸುವ ಸಂಬಂಧದಲ್ಲಿ ಸದರಿ ಬಾಲ ಕಾರ್ಮಿಕರ ತಂದೆ-ತಾಯಿಗಳನ್ನು ಪ್ರಾಸಿಕ್ಯೂಷನ್ ವಿಚಾರಣೆಗೊಳಪಡಿಸಿರುವುದಿಲ್ಲ.ಅಲ್ಲದೆ, ಅರ್ಜಿದಾರನು ಜೆಂಟ್ಸ್ ಸೆಲೆಕ್ಟ್ ಟೈಲರ್ಸ ಮಾಲೀಕನಾಗಿರುವನೆಂದು ಮತ್ತು ಆರೋಪಿತ ಬಾಲ ಕಾರ್ಮಿಕರಿಗೆ ಅರ್ಜಿದಾರನು ಉದ್ಯೋಗದಾತನಾಗಿದ್ದನು ಎಂಬುದನ್ನು ರುಜುವಾತುಪಡಿಸುವುದಕ್ಕೆ ಅಂಗಡಿಯ ಅಕ್ಕ ಪಕ್ಕದ ಅಂಗಡಿಯ ಮಾಲೀಕರನ್ನಾಗಲೀ ಅಥವಾ ಕಟ್ಟಡದ ಮಾಲೀಕರನ್ನಾಗಲೀ ಅಥವಾ ಯಾರೇ ಸ್ವತಂತ್ರ ಸಾಕ್ಷಿದಾರರನ್ನಾಗಲೀ ವಿಚಾರಣೆಗೊಳಪಡಿಸಿರುವುದಿಲ್ಲ ಎಂದು ವಾದದಲ್ಲಿ ನಿವೇದಿಸಿರುವರು.

ಮಾನ್ಯ ನ್ಯಾಯವಾದಿಗಳು ತಮ್ಮ ವಾದಾಂಶವನ್ನು ಮುಂದುವರೆಸಿ, ವೈದ್ಯಾಧಿಕಾರಿಯು ಬಾಲ ಕಾರ್ಮಿಕರನ್ನು ವೈದ್ಯಕೀಯ ಪರೀಕ್ಷೆ ಎ ನಡೆಸಿದ್ದು ಆ ಬಾಲಕರಿಬ್ಬರೂ 14 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವರೆಂದು ವೈದ್ಯಾಧಿಕಾರಿಯೂ ದೃಢಪಡಿಸಿದ್ದರೂ, ಪ್ರಾಸಿಕ್ಯೂಷನ್, ಬಾಲಕರಿಬ್ಬರ ನಿಖರ ವಯಸ್ಸು ಕಂಡುಹಿಡಿಯುವಂತಹ ಎಲುಬು ಪರೀಕ್ಷೆಗೆ ಮಕ್ಕಳನ್ನು ಒಳಪಡಿಸುವ ಮೂಲಕ ಬಾಲಕರ ನಿಖರವಾದ ವಯಸ್ಸನ್ನು ರುಜುವಾತು ಪಡಿಸಿರುವುದಿಲ್ಲ.ಮಕ್ಕಳಿಬ್ಬರ ಜನನ ಪ್ರಮಾಣಪತ್ರವನ್ನು ಪಡೆಯುವುದಕ್ಕೂ ಪ್ರಾಸಿಕ್ಯೂಷನ್ ಯಾವುದೇ ಪ್ರಯತ್ನವನ್ನು ನಡೆಸಿಲ್ಲದಿರುವುದು ಕಂಡು ಬರುತ್ತದೆ ಎಂದು ವಾದಾಂಶದಲ್ಲಿ ನಿವೇದಿಸಿರುವರು.

ಮುಂದುವರೆದು, ಈ ಮೊಕದ್ದಮೆಯ ಸಂಬಂಧದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರು ವಿವಿಧ ವೃತ್ತದ ಕಾರ್ಮಿಕ ಇನ್ಸ್ಪೆಕ್ಟರ್ರ ತಂಡ ಮತ್ತು ಇಎಸ್‌ಐ ಆಸ್ಪತ್ರೆಯ ವೈದ್ಯರಾಗಿದ್ದಾರೆ.ಆದ್ದರಿಂದ ಈ ಮೊಕದ್ದಮೆಯಲ್ಲಿ ವಿಚಾರಣೆ ಮಾಡಲಾದ ಈ ಎಲ್ಲಾ ಸಾಕ್ಷಿದಾರರು ಹಿತಾಸಕ್ತಿ ಸಾಕ್ಷಿದಾರರಾಗಿರುವರು ಮತ್ತು ಈ ಮೊಕದ್ದಮೆಯಲ್ಲಿ ಏಕ ಸ್ವತಂತ್ರ ಸಾಕ್ಷಿದಾರರನ್ನು ಸಹ ವಿಚಾರಣೆಗೊಳಪಡಿಸಿರುವುದಿಲ್ಲ.ಆದುದರಿಂದ, ಅರ್ಜಿದಾರ-ಆರೋಪಿಯ ಪರವಾಗಿ ಹಾಜರಾದ ಮಾನ್ಯ ನ್ಯಾಯಾಲಯ ಸಲಹೆಗಾರ ನ್ಯಾಯವಾದಿಗಳು, ಈ ಇಡೀ ಮೊಕದ್ದಮೆಯು ಪ್ರಾಸಿಕ್ಯೂಷನ್ ಪೂರ್ವಕಲ್ಪನೆಯಿಂದ ಮತ್ತು ಊಹೆಯಿಂದ ಆಧಾರಿತವಾಗಿದೆ ಮತ್ತು ಎಲ್ಲ ಯುಕ್ತ ಸಂದೇಹಗಳನ್ನು ಸಂದೇಹಾತೀತವಾಗಿ ಪ್ರಾಸಿಕ್ಯೂಷನ್ ರುಜುವಾತುಪಡಿಸುವುದಕ್ಕೆ ವಿಫಲವಾಗಿರುವುದರಿಂದ, ಪ್ರಾಸಿಕ್ಯೂಷನ್ ಪರವಾಗಿ ಪ್ರತಿಕೂಲ ತೀರ್ಮಾನವನ್ನು ತಳೆಯಬಹುದಾಗಿದೆ.ಇದರ ಹೊರತಾಗಿಯೂ, ಅಧಿವಿಚಾರಣಾ ನ್ಯಾಯಾಲಯ ಅಂತೆಯೇ ಅಪೀಲು ನ್ಯಾಯಾಲಯವು ಅರ್ಜಿದಾರನ ವಿರುದ್ಧ ಯಾವುದೇ ಸಾಕ್ಷ್ಯವಿಲ್ಲದೆ ಅವನನ್ನು ತಪ್ಪಿತಸ್ಥನೆಂದು ನಿರ್ಣಯಿಸುವ ದೋಷ ಎಸಗಿದೆ.ಹಾಗೇ ಎಸಗಿದ ದೋಷವು ಕಾನೂನಿಗೆ ವಿರುದ್ಧವಾಗಿದೆ.ಆದುದರಿಂದ ಈ ಪುನರೀಕ್ಷಣಾ ಅರ್ಜಿಯನ್ನು ಪುರಸ್ಕರಿಸಬೇಕೆಂದು ಮತ್ತು ಅಪೀಲು ನ್ಯಾಯಾಲಯವು ಸ್ಥಿರೀಕರಿಸಿದ ಅಧಿವಿಚಾರಣಾ ನ್ಯಾಯಾಲಯವು ಜಾರಿ ಮಾಡಿದ ತೀರ್ಪನ್ನು ವಜಾಗೊಳಿಸಬೇಕೆಂದು ಅರ್ಜಿದಾರರ ಪರವಾಗಿ ನ್ಯಾಯವಾದಿಗಳು ಕೋರಿರುವರು.

ವಿರುದ್ಧವಾಗಿ, ಸರ್ಕಾರದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು, ಅಧಿವಿಚಾರಣಾ ನ್ಯಾಯಾಲಯವು, ದೂರಿನ ವರ್ಷವನ್ನು ನಮೂದಿಸುವಲ್ಲಿ ಅಜಾಗರೂಕತೆಯಿಂದ ಉಂಟಾದ ದೋಷವೆಂದು ಆ ಸಂಗತಿಯನ್ನು ಗಮನಕ್ಕೆ ತಂದುಕೊಂಡಿದೆ.ಈ ವಿಷಯವು ಸಾಕ್ಷ್ಯದ ಅಕ್ರಮತೆಯಾಗದಿರುವುದರಿಂದ ಅಪೀಲು ನ್ಯಾಯಾಲಯವು ಈ ಸಂಗತಿಯನ್ನು ಯುಕ್ತವಾಗಿಯೇ ಉಪೇಕ್ಷಿಸಿದೆ ಎಂದು

ವಾದಿಸಿದ್ದಾರೆ.ಮುಂದುವರೆದು, ವಿಚಾರಣೆಗೆ ಒಳಗಾದ ಸಾಕ್ಷಿದಾರರು ಅರ್ಜಿದಾರನ ಟೈಲರ್ ಅಂಗಡಿಯ ಸರಿಯಾದ ವಿಳಾಸವನ್ನು ದಾಖಲಿಸುವಾಗ ಲವೊಂದು ವ್ಯತ್ಯಾಸಗಳಾಗಿದ್ದರೂ, ಅಪೀಲು ನ್ಯಾಯಾಲಯವು ಸದರಿ ವ್ಯತ್ಯಾಸಗಳು ಮೊಕದ್ದಮೆಯ ಮೂಲ ಕಾರಣಕ್ಕೆ ಈ ವ್ಯತ್ಯಾಸಗಳು ಯಾವುದೇ ಚ್ಯುತಿಯನ್ನು ಮಾಡುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.ಅಲ್ಲದೆ, ಬಾಲಕರಿಬ್ಬರೂ 14 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವರೆಂದು ಪ್ರಾ.ಸಾ .4 ಆಗಿರುವ ವೈದ್ಯಾಧಿಕಾರಿಯ ಸಾಕ್ಷ್ಯವೇ ರುಜುವಾತುಪಡಿಸುತ್ತದೆ.ದೂರುದಾರನು ಸದರಿ ಬಾಲಕರ ವಯಸ್ಸನ್ನು ರುಜುವಾತುಪಡಿಸುವುದಕ್ಕಾಗಿ ಬಾಲ ಕಾರ್ಮಿಕರ ಪೋಷಕರ ಹೇಳಿಕೆಗಳನ್ನು ದಾಖಲಿಸಿಕೊಳ್ಳಬೇಕಾಗಿತ್ತು ಎಂಬ ಬಗ್ಗೆ ನಿರ್ದಿಷ್ಟ ನಿಯಮವೇನು ಇರುವುದಿಲ್ಲ ಎಂದು ಮಾನ್ಯ ಹೆಚ್ಸಿಜಿಪಿಯವರು ವಾದಿಸಿರುತ್ತಾರೆ.ವಾದಾಂಶವನ್ನು ಮುಂದುವರೆಸಿ, ಅಪ್ರಾಪ್ತ ಸ್ವಭಾವದವರಾದ ಸಾಕ್ಷಿದಾರರ ಹೇಳಿಕೆಗಳು ಅಸಂಗತತೆಯಿಂದ ಕೂಡಿದ್ದು, ಈ ವ್ಯತ್ಯಾಸಗಳನ್ನು ಅಧಿವಿಚಾರಣಾ ನ್ಯಾಯಾಲಯವು ಈಗಾಗಲೇ ಉಪೇಕ್ಷಿಸಿದೆ ಮತ್ತು ಆರೋಪಿ ಅರ್ಜಿದಾರ ತಪ್ಪಿತಸ್ಥನೆಂಬುದು ನಿರ್ಣಯಿಸಿರುವುದು ಸರಿಯಾದುದಾಗಿದೆ.ಅದರ ನಿರ್ಣಯವನ್ನು ಅಪೀಲು ನ್ಯಾಯಾಲಯವು ಸಹ ದೃಢೀಕರಿಸಿ ಎತ್ತಿ ಹಿಡಿದಿದೆ.ಈ ತೀರ್ಪುಗಳು ಈ ಅರ್ಜಿಯಲ್ಲಿ ಯಾವುದೇ ಮಧ್ಯಪ್ರವೇಶಿಕೆಯನ್ನು ಕೋರುವುದಿಲ್ಲ.ಈ ಎಲ್ಲ ಕಾರಣಗಳಿಂದ ನ್ಯಾಯವಾದಿಗಳು ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿರುವರು.

ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ನಿವೇದಿಸಿದ ವಾದಾಂಶಗಳನ್ನು ಬಹು ಎಚ್ಚರಿಕೆಯಿಂದ ಪರಿಗಣಸಿದ ನಂತರ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಾಮರ್ಶಿಸಿದ ಮೇಲೆ ಅದರಲ್ಲಿ ದೂರುದಾರನಾದ ಹಿರಿಯ ಕಾರ್ಮಿಕ ಇನ್ಸ್ ಪೆಕ್ಟರ್, 7 ನೇ ವೃತ್ತ ಇವರು ಬೆಂಗಳೂರು ನಗರದ, 9 ನೇ ವೃತ್ತ, 16 ನೇ ವೃತ್ತ ಮತ್ತು 20 ನೇ ವೃತ್ತದ ಕಾರ್ಮಿಕ ಇನ್ಸ್ಪೆಕ್ಟರ್ ಮತ್ತು ಇಎಸ್ಐ ಆಸ್ಪತ್ರೆಯ ವೈದ್ಯರಾದ ಡಾ || ಪುಂಡರೀಕಾಕ್ಷ ಮತ್ತು ಶಿಕ್ಷಣ ಇಲಾಖೆಯ ಶ್ರೀ ಮುನಿಬೈಯಣ್ಣ ಇವರೊಂದಿಗೆ ಅರ್ಜಿದಾರನ " ಜೆಂಟ್ಸ್ ಸೆಲೆಕ್ಟ್ ಟೈಲರ್ " ಅಂಗಡಿಯನ್ನುದಿನಾಂಕ: 27.01.2006 ರಂದು ತಪಾಸಣೆ ಮಾಡಿದಾಗ, ಅಂಗಡಿಯಲ್ಲಿ ಇಬ್ಬರು ಬಾಲ ಕಾರ್ಮಿಕರಾದ ಮಾಸ್ಟರ್ ಆನಂದ್ರಾಜ್ 12 ವರ್ಷ ಮತ್ತು ಮಾಸ್ಟರ್ ನರೇಂದ್ರ 13 ವರ್ಷಗಳು ಇವರಿಬ್ಬರು ಅಲ್ಲಿ ಕೆಲಸ ಮಾಡುತ್ತಿರುವುದು ಅವರಿಗೆ ಕಂಡುಬರುತ್ತದೆ.ಅರ್ಜಿದಾರನು ನೇಮಕ ಮಾಡಿಕೊಂಡಿದ್ದ ಸದರಿ ಬಾಲ ಕಾರ್ಮಿಕರಿಬ್ಬರ ವಯಸ್ಸಿನ ಬಗ್ಗೆ ಯಾವುದೇ ಸಾಕ್ಷ್ಯವನ್ನು ನೀಡಲು ಸಾಧ್ಯವಾಗದಿದ್ದರಿಂದ, ಸ್ಥಳದಲ್ಲಿಯೇ ಆ ಬಾಲಕರಿಬ್ಬರನ್ನು ವೈದ್ಯರು ಪರೀಕ್ಷಿಸಿ ಅವರಿಬ್ಬರೂ 14 ವರ್ಷಕ್ಕಿಂತ ಕೆಳಗಿನ ವಯಸ್ಸಿನವರೆಂದು ಪ್ರಮಾಣೀಕರಿಸಿರುವರು.ತದನಂತರದಲ್ಲಿ ನಿಶಾನೆ ಪಿ .7 ರಲ್ಲಿರುವಂತೆ ಅರ್ಜಿದಾರನ ವಿರುದ್ಧ ಮೇಲೆ ಹೇಳಲಾದ ಆರೋಪಿತ ಅಪರಾಧದ ಪ್ರಕಾರದಂತೆ ಮೊಕದ್ದಮೆಯನ್ನು ಹೂಡಲಾಗಿದೆ.ತನಿಖೆಯ ನಂತರದಲ್ಲಿ ಅಧಿವಿಚಾರಣಾ ನ್ಯಾಯಾಲಯವು ಅರ್ಜಿದಾರನು ತಪ್ಪಿತಸ್ಥನೆಂದು ತೀರ್ಪು ನೀಡಿದೆ.ಸದರಿ ತೀರ್ಪನ್ನು ಅಪೀಲು ನ್ಯಾಯಾಲಯ ದೃಢೀಕರಿಸಿ ಎತ್ತಿ ಹಿಡಿದಿದೆ.

ದಾಖಲೆಯಲ್ಲಿನ ಸಾಕ್ಷ್ಯಾಧಾರಗಳನ್ನು ಪರಾಮರ್ಶಿಸಿದಾಗ, ನನಗೆ ಅಧಿವಿಚಾರಣಾ ನ್ಯಾಯಾಲಯದ ಹಾಗೂ ಅಪೀಲು ನ್ಯಾಯಾಲಯಗಳೆರಡೂ ಕಲ್ಪನೆ ಮತ್ತು ಊಹಾತ್ಮಕ ಆಧಾರದ ಮೇಲೆ ವ್ಯವಹರಣೆಯನ್ನು ನಡೆಸಿರುವುದು ಕಂಡು ಬರುತ್ತದೆ.ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯಾಂಗ ಸಲಹೆಗಾರರಾದ ನ್ಯಾಯವಾದಿಗಳು ಮಂಡಿಸಿದ ವಾದಾಂಶದಲ್ಲಿರುವಂತೆ, ನನಗೂ ಸಾಕ್ಷಿದಾರರ ಹೇಳಿಕೆಗಳಲ್ಲಿ ಅನೇಕ ಅಸಂಗತತೆಗಳಿರುವುದು ಕಂಡು ಬಂದಿದೆ.ನಿಶಾನೆ ಪಿ .7 ರಲ್ಲಿರುವ ದೂರಿನಲ್ಲಿ, ಅಪರಾಧ ನಡೆದ ಸ್ಥಳವು ಹೋಟೆಲ್ ಬೃಂದಾವನ ಕಟ್ಟಡದ ನೆಲಮಾಳಿಗೆಯಲ್ಲಿರುವ " ಜೆಂಟ್ಸ್ ಸೆಲೆಕ್ಟ್ ಟೈಲರ್ " ಎಂದು

ನಮೂದಿಸಲಾಗಿದೆ.ಅದರ ಬಗ್ಗೆ ಮುಖ್ಯ ವಿಚಾರಣೆಯ ಸಂದರ್ಭದಲ್ಲಿ ದೂರುದಾರ-ಪಿಡಬ್ಲ್ಯು .1 ಸಹ ಹೇಳಿಕೆಯನ್ನು ನೀಡಿರುತ್ತಾನೆ.ಆದಾಗ್ಯೂ, ಬಾಲ ಕಾರ್ಮಿಕ ಮಾಸ್ಟರ್ ಆನಂದ್ ರಾಜ್ನ ಆಪಾದಿತ ಹೇಳಿಕೆಯಾಗಿರುವ ನಿಶಾನೆ ಪಿ .1 ರಲ್ಲಿ ಅಪರಾಧದ ಸ್ಥಳವು ಜಿನ್ನಾಗರಮ್ಮ ದೇವಸ್ಥಾನದ ಎದುರು ಇದೆ. ಮುಂದುವರೆದು ಬಾಲ ಕಾರ್ಮಿಕ ಮಾಸ್ಟರ್ ನರೇಂದ್ರನ ಆಪಾದಿತ ಹೇಳಿಕೆಯಾಗಿರುವ ನಿಶಾನೆ 2 ರಲ್ಲಿರುವ ತ್ರಿಭುವನ್ ಹೊಟೇಲ್ನ ತಲ ಮಹಡಿಯು ಆರೋಪಿತ ಸ್ಥಳವಾಗಿದೆ.ನಿಶಾನೆ ಪಿ .3 ರಲ್ಲಿರುವ ತನಿಖಾ ವರದಿಯಲ್ಲಿ, ಅದನ್ನು ಬೃಂದಾವನ ಕಟ್ಟಡದ ನೆಲಮಾಳಿಗೆಯ ಮಹಡಿ ಎಂದು ಹೇಳಲಾಗಿದೆ.ನಿಶಾನೆ ಪಿ .4 ರಲ್ಲಿ ತ್ರಿಭುವನ್ ಥಿಯೇಟರ್ ಎದುರು 5 ನೇ ಮುಖ್ಯ ರಸ್ತೆಯ ಎದುರಿಗೆ ಎಂದು ಹೇಳಲಾಗಿದೆ.ನಿಶಾನೆ ಪಿ .6 ರಲ್ಲಿ ಮತ್ತೆ ಬೃಂದಾವನಾ ಕಟ್ಟಡದ ತಳ ಮಹಡಿಯೆಂದು ನಮೂದಿತವಾಗಿದೆ.3 ಸಾಕ್ಷಿದಾರರು ಹೇಳಿದ ಕಟ್ಟಡಗಳೆಲ್ಲವು ಗಾಂಧಿನಗರದ ವಿವಿಧ ಸ್ಥಳಗಳಲ್ಲಿವೆ ಮತ್ತು " ಜೆಂಟ್ಸ್ ಸೆಲೆಕ್ಟ್ ಟೈಲರ್ " ಯಾವ ನಿಗದಿತ ಸ್ಥಳದಲ್ಲಿದೆ ಎಂಬುದರ ಸಂಬಂಧಲ್ಲಿ ಸಾಕ್ಷ್ಯಗಳು ಅಸಂಗತತೆಯಿಂದ ಕೂಡಿದೆ.ಆದುದರಿಂದ ಅಪರಾಧ ಸಂಭವಿಸಿದ ಸ್ಥಳದ ಸಂಬಂಧದಲ್ಲಿ ಇರುವ ಗಂಭೀರವಾದ ಸಂದೇಹಗಳನ್ನು ನಿವಾರಿಸುವುದಕ್ಕೆ ಪ್ರಾಸಿಕ್ಯೂಷನ್ಗೆ ಸಾಧ್ಯವಾಗಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ಮುಂದುವರೆದು, ಅರ್ಜಿದಾರನು " ಜೆಂಟ್ಸ್ ಸೆಲೆಕ್ಸ್ ಟೈಲರ್'ನ ಮಾಲೀಕನೇ ಅಥವಾ ಬಾಡಿಗೆದಾರನೇ ಅಥವಾ ಭೋಗ್ಯದಾರನೇ ಎಂಬುದನ್ನು ರುಜುವಾತುಪಡಿಸುವ ಯಾವುದೇ ಸಾಕ್ಷ್ಯವನ್ನು ಪ್ರಾಸಿಕ್ಯೂಷನ್ ಹಾಜರುಪಡಿಸಿರುವುದಿಲ್ಲ.ಅಲ್ಲದೆ, ಪ್ರಾಸಿಕ್ಯೂಷನ್ ಅರ್ಜಿದಾರನು ಬಾಲ ಕಾರ್ಮಿಕರೆಂದು ಕರೆಯಲಾದ ಈ ಇಬ್ಬರೂ ಬಾಲಕರಿಗೆ ನಿಜವಾಗಿಯೂ ಉದ್ಯೋಗದಾತನಾಗಿರುವನೆ ಎಂದು ವಾಸ್ತವವಾಗಿ ರುಜುವಾತುಪಡಿಸುವುದಕ್ಕೆ ಸಂಪೂರ್ಣವಾಗಿ ವಿಫಲವಾಗಿದೆ.ಅರ್ಜಿದಾರನು ಕೆಲಸಕ್ಕಿಟ್ಟುಕೊಂಡಿದ್ದವೆಂದು ಆರೋಪಿಸಲಾದ ಸದರಿ ಬಾಲ ಕಾರ್ಮಿಕರ ಪೋಷಕರನ್ನು ಕಡೇಪಕ್ಷ al ವಿಚಾರಣೆಗೊಳಪಡಿಸುವ ಪ್ರಯತ್ನವನ್ನು ಪ್ರಾಸಿಕ್ಯೂಷನ್ ಮಾಡಬಹುದಾಗಿತ್ತು.ಆದರೆ ಅದನ್ನು ಸಹ ಪ್ರಾಸಿಕ್ಯೂಷನ್ ಮಾಡಿರುವುದಿಲ್ಲ.ಸಾಕ್ಷಿದಾರರ ಹೇಳಿಕೆಯಲ್ಲಿನ ಅಸಂಗತತೆಯ ದೃಷ್ಟಿಯಿಂದ ಮಾನ್ಯ ನ್ಯಾಯಾಲಯ ಸಲಹೆಗಾರ ನ್ಯಾಯವಾದಿಗಳು ಮಂಡಿಸಿದ ವಾದಾಂಶದಂತೆ ಅಂಕಿಅಂಶಗಳ ಉದ್ದೇಶಕ್ಕಾಗಿ ಅರ್ಜಿದಾರನ ವಿರುದ್ಧ ಮೊಕದ್ದಮೆಯನ್ನು ಹೂಡಲಾಗಿದೆಯೇ?ಎಂಬ ಸಂದೇಹವು ಈ ನ್ಯಾಯಾಲಯದ ಮನಸ್ಸಿನಲ್ಲಿ ಉದ್ಭವವಾಗುತ್ತದೆ.

ಆದುದರಿಂದ ನನ್ನ ಅಭಿಪ್ರಾಯದಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಮತ್ತು ಅಪೀಲು ನ್ಯಾಯಾಲಯ ದೃಢೀಕರಿಸಿದ ಅಪರಾಧಿ ಎಂಬ ತೀರ್ಪು ಮತ್ತು ಶಿಕ್ಷೆಯನ್ನು ವಜಾಗೊಳಿಸುವುದು ಅಗತ್ಯ.

ತದನುಸಾರವಾಗಿ, ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ.

ಆಜ್ಞೆ

ಈ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯನ್ನು ಪುರಸ್ಕರಿಸಲಾಗಿದೆ.ಕಿಮಿನಲ್ ಅಪೀಲುಸಂಖ್ಯೆ: 535/2010 ರದಿನಾಂಕ: 4.11.2010 ರಲ್ಲಿ ಅಪೀಲು ನ್ಯಾಯಾಲಯವು ದೃಢೀಕರಿಸಿದ ಮತ್ತು ಅಧಿವಿಚಾರಣಾ ನ್ಯಾಯಾಲಯವು ಸಿಸಿಸಂಖ್ಯೆ: 1272/2006 ರದಿನಾಂಕ: 3.7.2010 ರಲ್ಲಿ ಹೊರಡಿಸಿದ ತೀರ್ಪು ಮತ್ತು ದಂಡದ ಆದೇಶವನ್ನು ಈ ಮೂಲಕ ವಜಾಗೊಳಿಸಲಾಗಿದೆ.ಅರ್ಜಿದಾರ-ಆರೋಪಿಯ ವಿರುದ್ಧ ಹೂಡಲಾದ ಅಪರಾಧಗಳಿಂದ ಅವನನ್ನು ಖುಲಾಸೆಗೊಳಿಸಲಾಗಿದೆ.ಅರ್ಜಿದಾರ-ಆರೋಪಿ ಯಾವುದೇ ಜುಲ್ಮಾನೆಯ

ಮೊತ್ತವನ್ನು ಸಂದಾಯ ಮಾಡಿದ ಪಕ್ಷದಲ್ಲಿ ಯುಕ್ತ ದಾಖಲೆಗಳೊಂದಿಗೆ ಅದನ್ನು ಅವನಿಗೆ ಮರುಪಾವತಿಸತಕ್ಕದ್ದು.

ನ್ಯಾಯಾಲಯ ಸಲಹೆಗಾರ ವಕೀಲರಿಗೆ ನಿಗದಿಪಡಿಸಿದ 10,000/ ರೂ.ಗಳ ಶುಲ್ಕವನ್ನು ನಿಗದಿಪಡಿಸಿದ್ದು ಅದನ್ನು ಕಾನೂನಿಗನುಸಾರವಾಗಿ ಸರ್ಕಾರವು ಪಾವತಿಸತಕ್ಕದ್ದು.